


# ಮೋಹಕ ಕಡಲಸಿಂಹ

ಸ್ಯಾನ್‌ಫ್ರಾನ್ಸಿಸ್ಕೋಗೆ ಹೋದವರು ಯಾರೂ ಅಲ್ಲಿನ ಫಿಷರ್ ಮೆನ್ಸ್ ವಾರ್ಫ್ ಅನ್ನು ನೋಡದೆ ಇರಲಾರರು. ಅಲ್ಲಿ ಚಾಕೊಲೇಟು ಅಂಗಡಿಗಳನ್ನು ನೋಡುತ್ತಾ ಮುಂದೆ ಮುಂದೆ ಸಾಗಿದಾಗ ಫಿಷರ್‌ಮೆನ್ಸ್ ವಾರ್ಫ್‌ನ ಅಂಚಿಗೆ ಇರುವುದು ಪಿಯರ್39. ಸಮುದ್ರದ ತಟದಲ್ಲಿನ ಪ್ರವಾಸಿಗಳನ್ನು ಆಕರ್ಷಿಸುವ ಮನರಂಜನಾ ತಾಣವಿದು.

ಇಲ್ಲಿ ಸದಾ ಕಿಕ್ಕಿರಿದು ತುಂಬಿರುತ್ತಾರೆ. ಇಲ್ಲಿನ ಅದ್ಭುತ ಅಕ್ವೇರಿಯಂ, ಎಲ್ಲ ಅಂಗಡಿಗಳು ಸೇರುವ ಚೌಕದಲ್ಲಿ ಸದಾ ಏನಾದರೊಂದು ಕಾರ್ಯಕ್ರಮ ನಡೆಯುತ್ತಲೇ ಇರುತ್ತದೆ. ನಮ್ಮ ದೊಂಬರಾಟದಂತೆ ರಸ್ತೆಯಲ್ಲಿಯೇ ಒಂದು ಸುಂದರ ವೇದಿಕೆಯಲ್ಲಿ ಕಸರತ್ತು, ಯಕ್ಷಿಣಿ ಎಲ್ಲವೂ ನಡೆಯುತ್ತಿರುತ್ತದೆ. ಅಲ್ಲಿ ಜನಸಾಗರವೇ ತುಂಬಿರುತ್ತದೆ. ಆದರೆ ಇವೆಲ್ಲಕ್ಕಿಂತ ಮಿಗಿಲಾಗಿ ಅಲ್ಲಿನ ಸಾಗರದ ಹಡಗು ನಿಲ್ಲುವ ತಾಣದಲ್ಲಿ ಮರದ ದಿಮ್ಮಿಗಳ ಮೇಲೆ ಬಿಸಿಲಿಗೆ ಮೈಯೊಡ್ಡಿ ಮಲಗಿರುವ ಸಾಲು ಸಾಲು ಕಡಲ ಸಿಂಹಗಳು ಎಲ್ಲರ ಗಮನ ಸೆಳೆಯುತ್ತವೆ.

ಸೆಪ್ಟೆಂಬರ್ 1989ರ ವರೆಗೆ ಈ ಕಡಲ ಸಿಂಹಗಳು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿನ ರಿಚ್ಮಂಡ್ ಡಿಸ್ಟ್ರಿಕ್ಟ್ ನಲ್ಲಿನ ಕಡಲ ತಟದಲ್ಲಿರುವ ಬಂಡೆ (ಕಲ್ಲಿನ ರಚನಾ ದ್ವೀಪಗಳೆನಿಸಿಕೊಂಡ ಸೀಲ್ ರಾಕ್ಸ್ )ಗಳ ಮೇಲೆ ಈ ಕಡಲಸಿಂಹಗಳು ಇರುತ್ತಿದ್ದುವು. ಆದರೆ ಕ್ಯಾಲಿಫೋರ್ನಿಯಾದಲ್ಲಿ ಭೂಕಂಪವಾದ ನಂತರ ಪಿಯರ್ 39 ನಲ್ಲಿನ ಹಡಗುಗಳು ನಿಲ್ಲುವ ತಾಣಕ್ಕೆ ಈ ಕಡಲ ಸಿಂಹಗಳು ನಿಧಾನವಾಗಿ ಬಂದವು. ಅಲ್ಲಿ ಅವುಗಳ ಸಂಖ್ಯೆ ಹೆಚ್ಚಾಗಲಾರಂಭಿಸಿತು. ಅರ್ಧ ಟನ್ ತೂಕ, ಅದರ ವಾಸನೆ ಮತ್ತು ಈ ಪ್ರಾಣಿಗಳು ಮಾಡುವ ಸದ್ದುಗಳು ಹಡಗು ನಿಲ್ಲಿಸುವವರಿಗೆ ಒಂದು ರೀತಿ ತೊಂದರೆ ಎನಿಸಿ ಅವರು ದೂರಲು ಆರಂಭಿಸಿದರು. ಆದರೆ ಈ ಕಡಲ ಸಿಂಹಗಳನ್ನು ನೋಡಲು ಪ್ರವಾಸಿಗರು ಬರಲಾರಂಭಿಸಿದಾಗ ಪ್ರಾಣಿಗಳಿಗೆ ಅಲ್ಲಿ ಅನುವು ಮಾಡಿ ಹೊಸ ಅತಿಥಿಗಳಿಗೆ ಜಾಗ ಮಾಡಿ ಕೊಡಲು ಹಡಗುಗಳನ್ನು ಅಲ್ಲಿಂದ ವರ್ಗಾಯಿಸಲಾಯಿತು. ಅಂತೂ ಬಿಸಿಲಿಗೆ ಮೈಯ್ಯೊಡ್ಡಿ ನಿಲ್ಲುವ ಈ ಕಡಲ ಸಿಂಹಗಳನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ.

■ ಮಂಜುಳಾ ರಾಜ್

